ತುಮಕೂರು ಡಿಸ್ಟ್ರಿಕ್ಟ್

ತಾರೀಖು 9ನೇ ಸೆಪ್ಟಂಬರ್ 1884.

ಚಿತ್ರದುರ್ಗದ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ನಾರಣಯ್ಯಂಗಾರು ಮತ್ತು ಹುಳಿಯಾರದ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೃಷ್ಣರಾಯರು ಇವರುಗಳು, ತುಮಕೂರು ಡಿಸ್ಟ್ರಿಕ್ಟು ಮಾಜಿಸ್ಟ್ರೇಟರವರಿಂದ 1872ನೇ ಇಸವಿ Xನೇ ಆಕ್ಟೆಂಬ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 23ನೇ ಬಿ. ಸೆಕ್ಷನ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ:—

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ, (ಸೆಕ್ಷನ್ 135.)
2. ತಮಿಗೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕಸೀರುಗಳ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ, (ಸೆಕ್ಷನ್ 141.)
3. ನಿರೋಧವಗೈರೆಗಳನ್ನು ಅಡ್ಡೀಪಡಿಸುವಂತೆ ಹುಕುಂ ಮಾಡುವದಕ್ಕೆ ಅಧಿಕಾರ, (ಸೆಕ್ಷನ್ 518.)
4. ಹೇಬಿಗೆಗಳು ಬಾರ್‌ಬಾರ್ ನಡಿಯದಂತೆ ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡಲು ಅಧಿಕಾರ, (ಸೆಕ್ಷನ್ 519.)

ಪಿ. ಯ್ಯರ್. ಕೃಷ್ಣಮೂರ್ತಿ,
ಡಿಸ್ಟ್ರಿಕ್ಟು ಮಾಜಸ್ಟ್ರೇಟ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 10ನೇ ಸೆಪ್ಟಂಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಗುಡ್ಡದ ಬೀರನಹಳ್ಳಿ ಗ್ರಾಮಕ್ಕೆ ಕೀರಿದ 3ನೇ ಸರ್ವೆ ನಂಬರಿಗೆ ದಾಖಲಾದ ಭೂಜರ್ ಜಮೀನ್ ವೈಕಿ ಸುಮಾರು 400 ಎಕರೆ ಜಮೀನಿಗಾಗಿ ಕಾಫೀ ಸಾಗುವಳೀ ಬಗ್ಯೆ ದರಖಾಸ್ತು ಬಂದಿರುವದರಿಂದ, ಸದರೀ ಜಮೀನು 1884ನೇ ಇಸವಿ ಅಕ್ಟೋಬರ್ 15ನೇ ಮಧ್ಯಾಹ್ನದಲ್ಲಿ ಅಮಲ್ದಾರ್ರ ರೂಬರೂ ತರೀಕೆರೆ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಪರಂತು ಸದರೀ ಕ್ರಯವು ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯವನ್ನು ತೆರುವದಕ್ಕೂ ಮತ್ತು ಯಾವದಾದರು ನೀರಿನ ಹಕ್ಕುದಾರಿ ಮತ್ತು ಅವಶ್ಯಕವಾದ ಮಾರ್ಗದ ಹಕ್ಕುದಾರಿ ಯಿವುಗಳ ಉಳಿಸಿಕೊಳ್ಳುವಿಕೆಗೂ ವಳಪಟ್ಟಿರತಕ್ಕದ್ದು.

2. ಕ್ರಯದಾರನು ಹರಾಜು ಕೈದಾದ ಕೂಡ್ಲೆ ಕ್ರಯದ ಮೊಬಲಗ್ ವೈಕಿ ಕೀಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು, ಮತ್ತು ಬಾಕೀ ಕ್ರಯದ ಮೊಬಲಗನ್ನು ಹರಾಜು ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತೀ ಮಾಡದೇ ಯಿದ್ದರೆ, ಹಾಂಗೆ ಡಿಪಾಜಿಟ್ ಯಿಡೋಣಾದ ಮೊಬಲಗು ಸರಕಾರಕ್ಕೆ ದಂಡವಾಗಿ ಕೀರಿಸಿಕೊಳ್ಳಲ್ಪಡತಕ್ಕದ್ದು.

3. ಹಾಂಗೆ ಡಿಪಾಜಿಟ್ ಕೊಡದೇ ಹೋದರೆ ಯಾ ಕ್ರಯದ ಬಾಕೀ ಮೊಬಲಗನ್ನು ಪಾವತೀ ಮಾಡದಿದ್ದರೆ ಅವ್ವಲ್ ಕ್ರಯದಾರನ ಖರ್ಚಿಗೂ ವ ಲುಕ್ಸಾನಿಗೂ ವಳಪಟ್ಟು ಸದರೀ ಜಮೀನ್ ಪುನಹಾ ಹರಾಜು ಮಾಡಲ್ಪಡುವದು.

4. ಹರಾಜು ಡೆಪ್ಯುಟಿ ಕಮ್ಮಿಷನರಿಂದ ಕಾಯಂ ಮಾಡಲ್ಪಡುವ ತನಕ ಜಮೀನಿನ ಹರಾಜು ಕಾಯಮಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚತುರ್ಗಡಿಯು ಇದರಡಿ ಕಾಣಿಸಿರುತ್ತೆ, ಯಿನ್ನೂ ಹೆಚ್ಚಿಗೆ ತಪಸೀಲ್‌ಗಳು ಹರಾಜು ಕಾಲದಲ್ಲಿ ಕೇಳಿ ತಿಳಿದು ಕೊಳ್ಳಬಹುದು, ತಪಸಿಲ್‌ನಲ್ಲಾಗಲಿ ಅಂದಾಜು ಬೀಜವರೀಜಿಲ್ಲಾಗಲಿ ಯಿರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಶಾಂತಪುರದ ಕಟ್ಟೆ ಹೊಳೆ ಬಿಳಿಯಣ ಮಾಸ್‌ಕಾಲ್ ಗಟ್ಟು.
ದಕ್ಷಿಣಕ್ಕೆ—ಸದರೀ ಗ್ರಾಮದ 2—13—14ನೇ ಸರ್ವೆ ನಂಬರುಗಳು.
ಪೂರ್ವಕ್ಕೆ—ತಾಯಗಡಬೋಗಿ ಗ್ರಾಮದ ಸರಹದ್ದು.
ಪಶ್ಚಿಮಕ್ಕೆ—ಬೀರನಹಳ್ಳಿಯಿಂದ ಹಲಸೂರಿಗೆ ಹೋಗುವ ಕಾಲುದಾರಿ.

ಮಹಮ್ಮದಲ್ಲಿ, ಕೆ. ಬಿ.
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.